# ರಾಮಕೃಷ್ಣ ಭಾವಧಾರೆಯಲ್ಲಿ ದುಡಿದ ಮಹತ್ವದ ಸಂಘ ಸಂಸ್ಥೆಗಳು

**ಪ್ರೊ .ಜಿ.ಎಸ್. ಜಯದೇವ**

ಕರ್ನಾಟಕ ರಾಜ್ಯದಾದ್ಯಂತ ದಿವ್ಯತ್ರಯರ ಆದರ್ಶಗಳಿಂದ ಪ್ರೇರಣೆ ಹೊಂದಿ ಅತ್ಯದ್ಭುತವಾಗಿ ಸೇವಾಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರುವ ಅನೇಕ ಸಂಘ ಸಂಸ್ಥೆಗಳಿವೆ. ಈ ಕಾರ್ಯಗಳ ಹಿಂದಿನ ಪ್ರೇರಣೆ, ಕಾರ್ಯಯೋಜನೆ, ಅವರ ಕಾರ್ಯವೈಖರಿಗಳ ಬಗ್ಗೆ ತಾತ್ತ್ವಿಕ ವಿಶ್ಲೇಷಣೆಯನ್ನು ನಡೆಸಿರುವ ಲೇಖಕರು ಉತ್ತಮ ಚಿಂತಕರೂ, ವಾಗ್ಮಿಗಳೂ, ನುರಿತ ಬರಹಗಾರರೂ ಆಗಿದ್ದಾರೆ. ಚಾಮರಾಜನಗರದಲ್ಲಿ 'ದೀನಬಂಧು ಟ್ರಸ್ಟ್' ಎಂಬ ಅನಾಥಾಲಯವೊಂದನ್ನು ಕಟ್ಟಿ ಬೆಳೆಸುವ ಮೂಲಕ ಅವರು ಸಮಾಜಸೇವೆಯಲ್ಲೇ ತಮ್ಮನ್ನು ತಾವು ಪೂರ್ಣಾವಧಿ ತೊಡಗಿಸಿಕೊಂಡಿದ್ದಾರೆ.

ರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರು ಭಾರತದ ಮೇಲಷ್ಟೇ ಏಕೆ ಇಡೀ ವಿಶ್ವದಮೇಲೆ ಪ್ರಭಾವ ಬೀರಿದ್ದಾರೆ. ರಾಮಕೃಷ್ಣರ ಆಗಮನ ಇತಿಹಾಸದ ಪ್ರಾರ್ಥನೆಯ ಫಲ ಎಂದು ಕುವೆಂಪು ಗುರುತಿಸಿರುವುದರ ಹಿಂದೆ ಈ ಪ್ರಭಾವದ ವಿಸ್ತಾರ ಮತ್ತು ಸಂಘರ್ಷರಹಿತವಾದ ಅನ್ವಯಸಾಧ್ಯತೆಗಳು ನಿಸ್ಸಂಶಯವಾಗಿ ಕಂಡು ಬರುತ್ತವೆ. ಸರ್ವಧರ್ಮ ಸಮನ್ವಯವಷ್ಟೇ ಅವರ ಸಂದೇಶದ ತಿರುಳಲ್ಲ. ಮನುಷ್ಯ ದುಃಖಕ್ಕೆ ಮಿಡಿಯುವ ದಯೆಯನ್ನು ಮಾಯೆಯ ಸ್ಥಳದಲ್ಲಿಟ್ಟು ನೋಡುವ ಒಂದು ಪರಿಪಾಠವನ್ನು ಹುಟ್ಟು ಹಾಕಿದರು. ರಾಮಕೃಷ್ಣರಿಗೆ ಇದು ಬರಿ ಮಾತಾಗಿರಲಿಲ್ಲ. ಕಾಶಿ ಯಾತ್ರೆಗೆ ಹೋದ ಸಂದರ್ಭದಲ್ಲಿ ದೇವಘರ್ ಎಂಬ ಊರಿನ ಜನ ಊಟಬಟ್ಟೆಯಿಲ್ಲದ ದುರವಸ್ಥೆಯಲ್ಲಿದ್ದುದನ್ನು ಕಂಡು ಇವರಿಗೆಲ್ಲ ಊಟ ಬಟ್ಟೆ ಕೊಡುವವರೆಗೆ ತಾವು ಕಾಶಿಯಾತ್ರೆಗೆ ಬರುವುದಿಲ್ಲವೆಂದು ಹಠಹಿಡಿದು ಮಥುರನಿಂದ ಈ ಎಲ್ಲವನ್ನೂ ಕೊಡಿಸಿದರು. ರಾಮಕೃಷ್ಣರ ಈ ಮಾತುಗಳನ್ನು ಗಮನಿಸಿ: 'ನೀನು ಅಗ್ನಿ ತತ್ತ್ವವನ್ನು ಹುಡುಕುತ್ತಿದ್ದರೆ ಅದನ್ನು ಕಟ್ಟಿಗೆಯಲ್ಲಿ ಕಾಣಬಹುದು; ಭಗವತ್‌ತತ್ತ್ವವನ್ನು ಹುಡುಕುವುದಾದರೆ ಅದನ್ನು ಮನುಷ್ಯರ ಎದೆಯಲ್ಲಿ, ವಿಶೇಷವಾಗಿ ಭಕ್ತರ ಹೃದಯದಲ್ಲಿ ಹುಡುಕು.' ಮತ್ತೊಂದು ಮಾತು, 'ಜಗತ್ತಿಗೆ ಉಪಕಾರ ಮಾಡಲು ನೀನು ಯಾರು, ನೀನು ಹೆಚ್ಚೆಂದರೆ ಜನರಿಗೆ ಸೇವೆ ಮಾಡಬಹುದು ಅಷ್ಟೆ' ಈ ಮಾತುಗಳು ಮುಂದೆ ಸ್ವಾಮಿ ವಿವೇಕಾನಂದರು ಕರೆನೀಡಿದ ಸಮಾಜಸೇವೆಯ ಸಂದೇಶಕ್ಕೆ ಬುನಾದಿಯಾಯಿತು. ಈ ಹಿನ್ನಲೆಯನ್ನಿಟ್ಟುಕೊಂಡು ನಾವು ರಾಮಕೃಷ್ಣ-ವಿವೇಕಾನಂದರ ಪ್ರಭಾವವನ್ನು ಚರ್ಚಿಸೋಣ.

ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ 'ಪರೋಪಕಾರಾರ್ಥಮಿದಂ ಶರೀರಂ' ಎಂಬಂತಹ ಪರಹಿತವನ್ನು ಬಯಸುವ ಮಾತುಗಳಿವೆ. ಗುಹಾವಾಸಿಯಾಗಿದ್ದ ಶಿಲಾಯುಗದ ಮನುಷ್ಯರು ಪರಸ್ಪರ ಸಹಕರಿಸದೆ, ಪರಸ್ಪರ ಉಪಕರಿಸದೆ ಬದುಕುವುದು ಸಾಧ್ಯವಾಗುತ್ತಿರಲಿಲ್ಲ. ಆದರೆ ಮನುಷ್ಯ ಸಹಜವಾದ ಈ ಪರಸ್ಪರತೆಯನ್ನು,




ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಆಸ್ಪತ್ರೆ , ಸರಗೂರು

ಪರಸ್ಪರ ಉಪಕರಿಸುವ ಸಂವೇದನಾಶೀಲ ಬದುಕನ್ನು ಜಾತಿ ಪದ್ಧತಿ-ವರ್ಣಾಶ್ರಮಗಳು ಸ್ವಾರ್ಥಕೇಂದ್ರಿತ, ಸ್ವಜನಕೇಂದ್ರಿತ ಬದುಕಾಗಿ ರೂಪಿಸಿದವು. ಪರೋಪಕಾರಕ್ಕೆ ಅರ್ಹರಾದ ಪರರು ಜಾತಿ ಬಾಂಧವರು ಮಾತ್ರ ಎಂದಾಯಿತು. ಜಾತಿಪದ್ಧತಿಯ ಈ ಸಂಕುಚಿತ ಗುಂಪುಗಾರಿಕೆ ಮನೋಧರ್ಮದ ಮತ್ತೊಂದು ಪರಿಣಾಮವೆಂದರೆ ಇದು ಎಲ್ಲಾ ಬಗೆಯ ವ್ಯವಸ್ಥೆಗಳನ್ನೂ ಬಲಿಷ್ಠರಿಗೆ ಪೂರಕವಾಗಿ ಕಾರ್ಯ ನಿರ್ವಹಿಸುವಂತೆ ಮಾಡುತ್ತದೆ. ಬಲಿಷ್ಠರಿಗೆ ಅನೇಕ ಬಗೆಯ ವಿನಾಯ್ತಿಗಳನ್ನು ಮತ್ತು ಹೆಚ್ಚಿನ ಸುಖ-ಸಂಪತ್ತು ಸೌಕರ್ಯಗಳನ್ನು ನೀಡುತ್ತದೆ. ಬಲಿಷ್ಠರ ಯಜಮಾನಿಕೆಯ ಈ ಸಮಾಜದಲ್ಲಿ ಕೆಳವರ್ಗದ ಬಡವರು, ದುರ್ಬಲರು, ಸ್ತ್ರೀಯರು, ಅಂಚಿಗೆ ಸರಿಯುತ್ತಾರೆ, ಅಸ್ಪೃಶ್ಯರಿಗೆ ಬದುಕುವ ಹಕ್ಕನ್ನೇ ನಿರಾಕರಿಸಲಾಗುತ್ತದೆ. ಇಂತಹ ಸಮಾಜದಲ್ಲಿ ಕೆಳವರ್ಗದ ಜನ ಪ್ರತಿಷ್ಠಿತ ವರ್ಗದವರಿಗೆ ಅಡಿಯಾಳಾಗಿ ಅವರ ಸೇವೆ ಸಲ್ಲಿಸುವುದರಲ್ಲಿ ಮಾತ್ರ ತಮ್ಮ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳಬಹುದು.

ಹನ್ನೆರಡನೇ ಶತಮಾನದ ಶರಣರು ಕೆಳವರ್ಗದವರಿಗೆ, ಅಸ್ಪೃಶ್ಯರಿಗೆ, ಸ್ತ್ರೀಯರಿಗೆ ಸಮಾನ ಅವಕಾಶ ಒದಗಿಸಲು ಒಂದು ಚಳುವಳಿ





ಶ್ರೀಶಾರದಾದೇವಿ ಅಂಧರ ವಿಕಾಸ ಕೇಂದ್ರ , ಶಿವಮೊಗ್ಗ

ಯನ್ನೇ ಹುಟ್ಟುಹಾಕಿದರು. ಈ ಚಳುವಳಿ ಶ್ರಮಿಕವರ್ಗದ ದುಡಿಮೆಯನ್ನು ಅಧ್ಯಾತ್ಮ ಕೇಂದ್ರಿತ ಕಾಯಕವನ್ನಾಗಿ ರೂಪಿಸಿದ್ದಷ್ಟೇ ಅಲ್ಲ, ನಾಮರೂಪಗಳನ್ನು ದಾಟಿದ ಅದ್ವೈತಾನುಭೂತಿ 'ಶೂನ್ಯಸಂಪಾದನೆ' ಶ್ರಮಿಕವರ್ಗಕ್ಕೂ ಲಭ್ಯ ಎಂಬುದನ್ನು ಸಾಧಿಸಿ ತೋರಿಸಿತು. ಅಲ್ಲದೆ ಶ್ರೇಣೀಕೃತ ಸಮಾಜ ನಿರ್ಮಾಣಕ್ಕೆ ಪೂರಕವಾಗುವ ಮನುಸ್ಮೃತಿಯಂತಹ ಸಂಹಿತೆಗಳ ಅಧಿಕಾರವನ್ನು ಸಮರ್ಥವಾಗಿ ಎದುರಿಸಿತು. ಚಾರಿತ್ರಿಕವಾಗಿ ಹೇಳಬೇಕೆಂದರೆ ಶರಣ ಚಳುವಳಿಯಂತಹ ಒಂದು ಆಂದೋಲನ ಚರಿತ್ರೆಯಲ್ಲಿ ದುರ್ಲಭವೆಂದೇ ಹೇಳಬಹುದು. ಆದರೂ ಈ ಚಳುವಳಿಯ ಇತ್ಯಾತ್ಮಕ ಪರಿಣಾಮಗಳು ನಿಧಾನವಾಗಿ ಕುಸಿದು ಶ್ರಮಿಕ ವರ್ಗ ಮತ್ತು ಅಸ್ಪೃಶ್ಯರಿಗೆ ಸಮಾನ ಅವಕಾಶಗಳನ್ನು ನಿರಾಕರಿಸುವ ಸಮಾಜ ಇಂದಿಗೂ ಒಂದು ವಾಸ್ತವ.

ಶರಣ ಚಳುವಳಿಯ ನಂತರವೂ ಅನೇಕ ಸಮಾಜ ಸುಧಾರಣಾ ಪ್ರಯತ್ನಗಳು ನಡೆದವಾದರೂ ರಾಮಕೃಷ್ಣರ ಆಗಮನದವರೆಗೆ ಈ ಎಲ್ಲ ಚಳುವಳಿಗಳೂ ಸ್ಥಳೀಯ ಸಣ್ಣ ಸಣ್ಣ ವಲಯಗಳಲ್ಲಿ ಮಾತ್ರ ಒಂದು ಸಂಚಲನವನ್ನುಂಟುಮಾಡಿ ತಣ್ಣಗಾಗಿ ಬಿಟ್ಟವು. ಶ್ರೀರಾಮಕೃಷ್ಣ, ವಿವೇಕಾನಂದರ ಆಗಮನ ರಾಷ್ಟ್ರವ್ಯಾಪಿ ಪರಿಣಾಮ ಬೀರಲು ಅಂದಿನ ಚಾರಿತ್ರಿಕ ಸಂದರ್ಭ ಎಷ್ಟು ಕಾರಣವೋ ರಾಮಕೃಷ್ಣರ ಸರ್ವಧರ್ಮ ಸಮಭಾವವೂ ಇದಕ್ಕೆ ಅಷ್ಟೇ ಕಾರಣ ಎಂದು ಹೇಳಬಹುದು. ಎಲ್ಲಾ ವರ್ಣ-ವರ್ಗಗಳನ್ನೂ ಒಳಗೊಂಡು ಮುಂದೆ ಸಾಗುವ ಅಧ್ಯಾತ್ಮಕೇಂದ್ರಿತ ಸಮಾಜ ನಿರ್ಮಾಣಕ್ಕೆ ಪೂರಕವಾದ ತಾತ್ತ್ವಿಕತೆಯನ್ನು ರಾಮಕೃಷ್ಣ-ವಿವೇಕಾನಂದರ ದರ್ಶನ ಮತ್ತು ಚಿಂತನಧಾರೆಗಳು ಒದಗಿಸಿದವು. ಭಾರತದ ಸಂವಿಧಾನದ ಪೀಠಿಕೆಯಲ್ಲಿಯೇ 'ಸರ್ವ ಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯ' ಸ್ಥಾಪಿಸುವ ಮಾತುಗಳು ಬರುವುದಕ್ಕೂ ಭಾರತೀಯ ಚಿಂತನಾ ಪರಂಪರೆಯಲ್ಲಿ ಈ ತಾತ್ತ್ವಿಕತೆಯನ್ನು ಆಯಾಕಾಲದಲ್ಲಿ ಹುಟ್ಟಿ ಬಂದ ಸಂತಪರಂಪರೆ ಎತ್ತಿಹಿಡಿದಿರುವುದಕ್ಕೂ ಸಂಬಂಧವಿದೆ. ರಾಮಕೃಷ್ಣ ಪರಮಹಂಸರಂತೂ ಈ ತಾತ್ತ್ವಿಕತೆಯ ಜೀವಂತ ಭಾಷ್ಯವಾಗಿ ಬದುಕಿದರು. ಎಲ್ಲಾಧರ್ಮಗಳನ್ನು ಒಳಗೊಂಡ ಸರ್ವಧರ್ಮಸಮನ್ವಯದ ಸಾಧ್ಯತೆ ಭಾರತದಂತಹ ಬಹುತ್ವ ಪ್ರಧಾನ ದೇಶದಲ್ಲಿ ಮಾತ್ರ ಅರ್ಥಪೂರ್ಣ ಎಂಬುದನ್ನು ತಮ್ಮ ಆಧ್ಯಾತ್ಮಿಕ ದರ್ಶನಗಳ ಮೂಲಕ ಪರಮಹಂಸರು ವಿವರಿಸಿ ಗೊಂದಲಮಯ ವಾಗ್ವಾದಗಳಿಗೆ ತೆರೆ ಎಳೆದರು. ಸ್ವಾಮಿ ವಿವೇಕಾನಂದರು ಇದೇ ತಾತ್ತ್ವಿಕತೆಯನ್ನು ಅಂತಾರಾಷ್ಟ್ರೀಯ ವಲಯದಲ್ಲಿ ಅತ್ಯಂತ ಸಮರ್ಥವಾಗಿ ಪ್ರತಿಪಾದಿಸಿ ಅಂತರ್‌ಧರ್ಮೀಯ ಸಂವಾದ, ಸೌಹಾರ್ದಗಳು ಯಾವಾಗಲೂ ಸಾಧ್ಯ ಎಂಬುದನ್ನು ತಿಳಿಸಿದರು. ಮನುಕುಲದ ಚರಿತ್ರೆಯಲ್ಲಿ ಹಿಂದೆಂದೂ ಇಷ್ಟು ಸಮರ್ಥವಾದ ಸರ್ವಧರ್ಮಸಮನ್ವಯ ಸಾಧ್ಯವಾಗಿರಲಿಲ್ಲ ಎಂದೇ ಹೇಳಬೇಕು. ಶ್ರೀರಾಮಕೃಷ್ಣರ ಅಂತರಂಗದ ಆಧ್ಯಾತ್ಮಿಕ ಅನುಭೂತಿಯನ್ನು ಬಹಿರಂಗ ಜಗತ್ತಿನ ಅನ್ವಯಿಕ ಜ್ಞಾನವಾಗಿ ನಿರೂಪಿಸಲು ಸ್ವಾಮಿ ವಿವೇಕಾನಂದರಂತಹ ಪ್ರಚಂಡ ಶಕ್ತಿಗೆ ಸಾಧ್ಯವಾಯಿತು. ಬಹಿರಂಗ ಜಗತ್ತಿನ ಒಂದು ತುದಿಯಿಂದ ಅಂತರಂಗದ ಆಧ್ಯಾತ್ಮಿಕ ಜಗತ್ತಿನ ಮತ್ತೊಂದು ತುದಿಯವರೆಗೆ ವ್ಯಾಪಿಸಿದ ವಿವೇಕಾನಂದರ ಬೌದ್ಧಿಕ ಹರಹು ರಾಮಕೃಷ್ಣರ ಜೀವನ ಸಂದೇಶಕ್ಕೆ ಬರೆದ ಜೀವಂತ ಭಾಷ್ಯದ ಹಾಗೆ ಇದೆ. ಸ್ವಾಮಿ ವಿವೇಕಾನಂದರು ಹುಟ್ಟುಹಾಕಿದ ರಾಮಕೃಷ್ಣ ಸಂಸ್ಥೆಗಳು ಇಂದು ಸರ್ವಧರ್ಮ ಸಮನ್ವಯದ ನೆಲೆಯಲ್ಲಿ ಮಾತಿಗೆ ನಿಲುಕದ ಆಧ್ಯಾತ್ಮಿಕ ಅನುಭೂತಿಯ ಆದರ್ಶವನ್ನು ಕೇಂದ್ರದಲ್ಲಿಟ್ಟುಕೊಂಡು ಮನುಷ್ಯ ದುಃಖಕ್ಕೆ ಮಿಡಿಯುವ ಒಂದು ಭಾವ ಪ್ರವಾಹವನ್ನು ಭಾರತದ ಉದ್ದಗಲಕ್ಕೂ ಹರಿಯಬಿಟ್ಟಿದೆ. ಪಾಶ್ಚಾತ್ಯ ಪರಿಭಾಷೆಯಲ್ಲಿ ಹೆಚ್ಚು ಬಳಕೆಯಲ್ಲಿರುವ inclusive ಎಂದರೆ ಒಳಗೊಳ್ಳುವಿಕೆ ಪದವು ಭೌತಿಕ ಸವಲತ್ತುಗಳಿಂದ ವಂಚಿತರಾದವರನ್ನು ಒಳಗೊಳ್ಳುವ ಕಳಕಳಿಯನ್ನು ವ್ಯಕ್ತಪಡಿಸುತ್ತವೆ. ಆದರೆ ರಾಮಕೃಷ್ಣ ವಿವೇಕಾನಂದ ಚಳುವಳಿಯ ಸಂದರ್ಭದಲ್ಲಿ ಹುಟ್ಟಿಕೊಂಡು ದರಿದ್ರ ನಾರಾಯಣಸೇವೆಯ ಒಳಗೊಳ್ಳುವಿಕೆ ಊಹೆಗೂ ನಿಲುಕದ ವ್ಯಾಪಕತೆಯನ್ನು ತೆರದಿಡುತ್ತದೆ. ರಾಮಕೃಷ್ಣ ವಿವೇಕಾನಂದರ ಒಳಗೊಳ್ಳುವಿಕೆ ರಾಮಕೃಷ್ಣರ ದರ್ಶನಗಳನ್ನು ಆಧರಿಸಿವೆ ಎಂದೇ ಹೇಳಬಹುದು. ರಾಮಕೃಷ್ಣರ ದರ್ಶನಗಳು ನಿವೇದಿಸುವ ಸತ್ಯವೇನೆಂದರೆ ಧರ್ಮಧರ್ಮಗಳ ನಡುವೆ ಗೋಡೆಗಳಿಲ್ಲ; ಎಂದರೆ ಆಧ್ಯಾತ್ಮಿಕ ಅನುಭವಗಳ ವಲಯದಲ್ಲಿ ಈ ಯಾವ ಗೋಡೆಗಳೂ ಇಲ್ಲ, ಇರುವಂತೆ ಕಾಣುವುದೆಲ್ಲವೂ ಮನುಷ್ಯ ಮನಸ್ಸಿನ ಕೃತಕ ಸೃಷ್ಟಿ. ಹಾಗೆಂದು ಈ ಚಳುವಳಿಯು ಬಾಹ್ಯ ಜಗತ್ತಿನ ಸಾಂಪ್ರದಾಯಿಕ ಕಟ್ಟು-ಕಟ್ಟಳೆಗಳನ್ನು ಏಕಾಏಕಿ ನಾಶಮಾಡಿ ಹೊಸದೊಂದು ದಾರಿಯನ್ನು ತೆರೆದಿಡುವ ಗೋಜಿಗೆ ಹೋಗಲಿಲ್ಲ. ಖುರಾನ್, ಬೈಬಲ್, ಗೀತೆಗಳಿಲ್ಲದೆಡೆಗೆ ಮನುಕುಲದ ವಿಕಾಸ ಎಂದು ಸ್ವಾಮಿ ವಿವೇಕಾನಂದರು ಹೇಳಿದರಾದರೂ ಆ ಸ್ಥಿತಿಯನ್ನು ಈ ಎಲ್ಲವುಗಳ ಸಮನ್ವಯದ ಮೂಲಕ ಸಾಧಿಸಬೇಕು ಎಂದರು. ಏಕಾಏಕಿ ಇಂತಹ ಪಲ್ಲಟಗಳು ಸಾಧ್ಯವಿಲ್ಲ, ವೈವಿಧ್ಯಮಯ ವಿಕಾಸದ ಹಂತಗಳಲ್ಲಿರುವ ಮನಸ್ಸುಗಳು ಇದನ್ನು ಸ್ವೀಕರಿಸಲಾರವು. ಹಾಗಾಗಿ 'ಎಷ್ಟು ಮತಗಳೋ ಅಷ್ಟೂ ಪಥಗಳೇ' ಎಂಬ ರಾಮಕೃಷ್ಣರ ಮಾತು ಸರ್ವಧರ್ಮಸಮನ್ವಯವನ್ನು ಸಾಧಿಸುವ ಘರ್ಷಣೆಗಳೇ ಇಲ್ಲದ ಸುಲಭಮಾರ್ಗವಾಗಿ ಕಂಡುಬರುತ್ತದೆ. ಸರ್ವಧರ್ಮಸಮನ್ವಯಕ್ಕೆ ಪೂರಕವಾದ

ರಾಮಕೃಷ್ಣರ ದರ್ಶನಗಳು ತಾರ್ಕಿಕ ಮಂಡನೆಯನ್ನು ಮೀರಿದ ಅನುಭೂತಿಯನ್ನು ಆಧರಿಸಿವೆ. ರಾಮಕೃಷ್ಣರು ಭೇದರಹಿತವಾದ ಅಖಂಡ ಚೈತನ್ಯದ ದರ್ಶನವನ್ನು ಹೀಗೆ ವಿವರಿಸುತ್ತಾರೆ: 'ಗಡ್ಡದ ಮುಸಲ್ಮಾನನೊಬ್ಬ ಮಣ್ಣಿನ ತಟ್ಟೆ ತುಂಬ ಅನ್ನವನ್ನು ಹಿಡಿದಿದ್ದ, ಎಲ್ಲರ ಬಾಯಿಗೂ ಅನ್ನದ ಅಗುಳನ್ನು ಹಾಕಿದ, ನಾನೂ ಅದನ್ನು ತಿಂದೆ.' ಹಾಗೆಯೇ ತಾಯಿ ಕಾಳಿ ಎಂಟು ವರ್ಷದ ಮುಸ್ಲಿಂ ಬಾಲಕಿಯ ರೂಪದಲ್ಲಿ ಕಾಣಿಸಿಕೊಂಡಂತೆ ದರ್ಶನವಾಗುತ್ತದೆ, ಅವಳು ದಿಗಂಬರಿಯಾಗಿ ಕಂಡುಬಂದಳು ಎನ್ನುತ್ತ ಇರುವುದು ಒಂದೇ ಸತ್ಯ ಎನ್ನುತ್ತಾರೆ. ರಾಮಕೃಷ್ಣರು ಇಸ್ಲಾಂ-ಕ್ರೈಸ್ತ ಧರ್ಮಗಳನ್ನು ಒಳಗೊಳ್ಳುವ ಕುರಿತು ಮಾತನಾಡಿದಾಗ ಮತೀಯ ಸಾಮರಸ್ಯವನ್ನು ಉಪಯುಕ್ತತೆಯ ಕಾರಣಕ್ಕೆ ಪೂರಕವಾಗಿ ವ್ಯಾವಹಾರಿಕ ಲೆಕ್ಕಾಚಾರ ಒಂದನ್ನು ಹೆಣೆಯಬೇಕೆಂಬ ಉದ್ದೇಶ ಅವರಿಗಿರಲಿಲ್ಲ. ಅವರ ಸರ್ವಧರ್ಮ ಸಮನ್ವಯ ಸಂದೇಶ ಅಸ್ತಿತ್ವದ ಸತ್ಯವನ್ನಾಧರಿಸಿದೆ, ಪ್ರಾಮಾಣಿಕವಾದ ಸಾಧನೆ-ದರ್ಶನಗಳ ತಳಹದಿಯಿದೆ. ಸತ್ಯವನ್ನು ತರ್ಕದ ಅಂಕುಡೊಂಕು ಮಾರ್ಗಗಳ ಮೂಲಕ ಸಮೀಪಿಸುವುದಕ್ಕಿಂತ ನೇರವಾಗಿ ತಲುಪಬಹುದು ಎಂಬುದನ್ನು ಅವರು ತಮ್ಮ ಆಧ್ಯಾತ್ಮಿಕ ಪ್ರಯೋಗಶಾಲೆಯಲ್ಲಿನ ನಿರಂತರ ಪ್ರಯೋಗಗಳಿಂದ ತೋರಿಸಿದರು. ಧರ್ಮಸಮನ್ವಯದ ಮುಂದುವರಿದ ಭಾಗವಾಗಿ ವಿವೇಕಾನಂದರ ಮತ್ತು ಅವರ ಗುರುಭಾಯಿಗಳ, ಶ್ರೀಮಾತೆ ಶಾರದಾದೇವಿಯವರ ಜೀವನ ಸಂದೇಶಗಳು ನಮಗೆ ದಾರಿದೀಪವಾಗಿವೆ. ವಿವೇಕಾನಂದರು ಮೌಂಟ್ ಅಬುವಿನಲ್ಲಿ ಒಬ್ಬ ಮುಸ್ಲಿಂ ಲಾಯರನ ಮನೆಯಲ್ಲಿ ತಂಗುತ್ತಾರೆ. ಇದಕ್ಕೆ ಆಕ್ಷೇಪಣೆ ಎತ್ತಿದ ರಾಜನ ತಿಳಿಗೇಡಿ ದಿವಾನನಿಗೆ ಸ್ವಾಮೀಜಿ ಸರಿಯಾಗಿ ಉತ್ತರಿಸುತ್ತಾರೆ. ಒಬ್ಬ ಪರೆಯ ಸೇದುತ್ತಿದ್ದ ಹುಕ್ಕವನ್ನು ಯಾವ ಅಳುಕೂ ಇಲ್ಲದೆ ಸೇದುತ್ತಾರೆ. ಸ್ವಾಮಿ ಅಖಂಡಾನಂದರು ಅನಾಥಾಶ್ರಮ ಪ್ರಾರಂಭಿಸುವ ಪ್ರಸ್ತಾವ ಇಟ್ಟಾಗ ಮುಸಲ್ಮಾನ ಮಕ್ಕಳನ್ನೂ ಸೇರಿಸಿಕೊಳ್ಳಬೇಕೆಂದು ಹೇಳುತ್ತಾರೆ. ಶ್ರೀಮಾತೆಯವರು ಜಯರಾಂಬಾಟಿಯ ತಮ್ಮ ಮನೆಯನ್ನು ಮುಸಲ್ಮಾರು ಕಟ್ಟುತ್ತಿದ್ದುದನ್ನು ಸ್ಥಳೀಯರು ತಡೆದಾಗ, ಮುಸಲ್ಮಾನರೇ ಇದನ್ನು ಕಟ್ಟಿ ಮುಗಿಸಬೇಕೆಂದು ಹಟ ಹಿಡಿಯುತ್ತಾರೆ. ಕೊನೆಗೆ ಮುಸಲ್ಮಾನರೇ ಅದನ್ನು ಕಟ್ಟಿ ಮುಗಿಸುತ್ತಾರೆ. ಇಂದು ರಾಮಕೃಷ್ಣ ಆಶ್ರಮವು ಎಲ್ಲ ಮತ, ಪಂಥ ಧರ್ಮದವರಿಗೆ ತನ್ನ ಬಾಗಿಲನ್ನು ಮುಕ್ತವಾಗಿ ತೆರೆದಿದೆ. ಮತಾಂಧ ಹಿಂದುತ್ವವಾದಿ ಸಂಸ್ಥೆಗಳಿಗೂ ರಾಮಕೃಷ್ಣ ಮಠಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಮೂಲಭೂತವಾದಿ ಮತೀಯ ಸಂಸ್ಥೆಗಳು ತಾವು ಧರ್ಮವನ್ನು ರಕ್ಷಿಸುತ್ತಿದ್ದೇವೆ, ಧರ್ಮ ಒಂದು ಸೊತ್ತು, ಅದನ್ನು ಕಳೆದುಕೊಳ್ಳಬಾರದು, ಧರ್ಮಕ್ಕಾಗಿ ರಕ್ತಪಾತವಾದರೂ ಚಿಂತೆಯಿಲ್ಲ ಹಿಂಸೆಯಾದರೂ ಚಿಂತೆಯಿಲ್ಲ ಎಂಬ ಧೋರಣೆಯನ್ನು ಎತ್ತಿಹಿಡಿಯುತ್ತವೆ. ಆದರೆ ಧರ್ಮ ನಮ್ಮನ್ನು ರಕ್ಷಿಸುತ್ತದೆ, ನಿಜವಾದ ಧಾರ್ಮಿಕ ಬದುಕನ್ನು ಸಾಗಿಸಿದರೆ ಧರ್ಮಕ್ಕಾಗಿ ಹೋರಾಡುವ ಪ್ರಮೇಯವೇ ಇಲ್ಲದಂತಾಗುತ್ತದೆ ಎಂಬ ಸತ್ಯವನ್ನು ರಾಮಕೃಷ್ಣ ಸಂಸ್ಥೆಗಳು ಎತ್ತಿಹಿಡಿಯುತ್ತವೆ. ಸ್ವಾಮಿ ವಿವೇಕಾನಂದರ ಕ್ಷೀರಭವಾನಿ ದೇವಸ್ಥಾನದ ಅನುಭವ ಈ ಧೋರಣೆಗೆ ಆಧ್ಯಾತ್ಮಿಕ ನೆಲೆಯ ಪುರಾವೆಯನ್ನೊದಗಿಸುತ್ತದೆ. ಯವನರು ನಮ್ಮ ದೇವಸ್ಥಾನಗಳನ್ನು ಮುರಿದುಹಾಕಿದಾಗ ನಾನು ಅಲ್ಲಿದ್ದಿದ್ದರೆ ಅದನ್ನು ತಡೆಯುತ್ತಿದ್ದೆ ಎಂಬ ಭಾವನೆ ಸ್ವಾಮೀಜಿಯವರಲ್ಲಿ ಹುಟ್ಟಿತು. ತಕ್ಷಣವೇ ಗರ್ಭಗುಡಿಯಿಂದ ''ಮಗು ನೀನು ನನ್ನನ್ನು ರಕ್ಷಿಸುತ್ತೀಯೋ ಅಥವಾ ನಾನು ನಿನ್ನನ್ನು ರಕ್ಷಿಸಬೇಕೊ?'' ಎಂಬ ಒಂದು ಧ್ವನಿ ಅವರಿಗೆ ಕೇಳಿಸಿತಂತೆ. ಇದು ನಿಮ್ಮ ಮನಸ್ಸಿನಲ್ಲಿಯೇ ಹುಟ್ಟಿದ ಭಾವನೆಯಾಗಿರಬೇಕು ಎಂದು ಅವರ ಶಿಷ್ಯ ಹೇಳಿದಾಗ ನನ್ನ ಈ ಕಿವಿಗಳಿಂದಲೇ ಈ ಮಾತುಗಳನ್ನು ಕೇಳಿದೆ ಎಂದು ಅವರು ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ರಾಮಕೃಷ್ಣ-ವಿವೇಕಾನಂದ ಚಳುವಳಿ ಹುಟ್ಟುಹಾಕಿದ ಒಳಗೊಳ್ಳುವಿಕೆ ಕೇವಲ ಧರ್ಮಗಳನ್ನಷ್ಟೇ ಒಳಗೊಳ್ಳುತ್ತದೆ ಎಂದಲ್ಲ, ಸ್ಥಳೀಯವಾದ ಎಲ್ಲಬಗೆಯ ವೈವಿಧ್ಯವನ್ನೂ ಒಳಗೊಳ್ಳುತ್ತದೆ, ಎಂದರೆ ಗೌರವಿಸುತ್ತದೆ. ಅನೇಕ ಬಗೆಯ ಉಪಸಂಸ್ಕೃತಿಗಳನ್ನು, ಸ್ಥಳೀಯಹಬ್ಬ ಜಾತ್ರೆಗಳನ್ನು ವಿಕಾಸದ ಹಂತದಲ್ಲಿರುವ ವಿವಿಧ ಸೋಪಾನಗಳಾಗಿ ನೋಡುತ್ತದೆ. ಸ್ವಾಮಿ ವಿವೇಕಾನಂದರು ಸ್ಥಳೀಯ ಭಾಷೆಯಲ್ಲಿ ಶಿಕ್ಷಣ ಕೊಡಿ, ನಮ್ಮ ಅಭಿವೃದ್ಧಿ ನಮ್ಮ ಸಂಸ್ಕೃತಿಗೆ ಅನುಗುಣವಾಗಿರಲಿ ಎಂದು ಕರೆನೀಡಿದರು. ಆಧ್ಯಾತ್ಮಿಕ ಅನುಭೂತಿಯ ಭರದಲ್ಲಿ ಹಸಿದ ಹೊಟ್ಟೆಗೆ ಅನ್ನಬೇಕೆಂಬ ವಾಸ್ತವವನ್ನು ಅವರು ಮರೆಯಲಿಲ್ಲ, ಮೊದಲು ಅನ್ನ ಅನಂತರ ವೇದಾಂತ ಎಂದರು. ಅನುಕರಣೆ ಅವನತಿಯ ಕುರುಹು, ಪರರನ್ನು ಅವರ ಥಳುಕು-ಬೆಳಕಿಗೆ ಮರುಳಾಗಿ ಅನುಕರಿಸಬೇಡಿ, ಭಾರತೀಯತೆಯನ್ನು ಉಳಿಸಿಕೊಳ್ಳಬಹುದಾದ ಸ್ವದೇಶಿ ಉಡುಗೆ, ತೊಡುಗೆ, ಆಹಾರ ಪದ್ಧತಿಗಳನ್ನು ಕೈಬಿಡಬೇಡಿ ಎಂದರು.

ಸಮಾಜಸೇವೆ ಮತ್ತು ಅಭಿವೃದ್ಧಿ ಕುರಿತಾಗಿ ಅತ್ಯಾಧುನಿಕ ಪರಿಕಲ್ಪನೆಗಳನ್ನು ಸ್ವಾಮೀಜಿ ಸುಮಾರು ನೂರೈವತ್ತು ವರ್ಷಗಳ ಹಿಂದೆಯೇ ನಮಗೆ ಕೊಟ್ಟರು. ದಿನಕಳೆದಂತೆ ನಮ್ಮ ಸಮಾಜವು ಇದೇ ದಿಕ್ಕಿನಲ್ಲಿ ವಿಕಾಸವಾಗುವುದು ಎಷ್ಟು ಮುಖ್ಯ ಎಂದು ಅರಿವಾಗುತ್ತಿದೆ. ಅವಲಂಬನೆಯಿಂದ ಸ್ವಾವಲಂಬನೆಯೆಡೆಗೆ, ಸಾಂಸ್ಕೃತಿಕ ಗುಲಾಮಗಿರಿಯಿಂದ ಭಾರತೀಯ ಸಂಸ್ಕೃತಿಯ ವಾರಸುದಾರರಾಗುವ ಕಡೆಗೆ ನಮ್ಮ ವಿಕಾಸವಾಗವಾಗಬೇಕು ಎಂಬುದು ಸ್ವಾಮೀಜಿಯವರ ಅಭಿಪ್ರಾಯ. ಅಸ್ಪೃಶ್ಯತೆ ಜಾತೀಯತೆಯಿಂದ ಬಿಡಿಸಿಕೊಂಡು ಸಂಸ್ಕೃತಿಯ ಮೂಲಕ ಸಮಾಜವಾದಿ ನೆಲೆಯೆಡೆಗೆ ವಿಕಾಸವಾಗುತ್ತೇವೆಂಬುದು ಅವರ ದೃಢವಿಶ್ವಾಸ. ಅವರು ಪ್ಯಾರಿಸ್ ನಗರದಲ್ಲಿ ನಡೆದ ಅಂತಾರಾಷ್ಟ್ರೀಯ ಪ್ರದರ್ಶನದಲ್ಲಿ ಪಾಲ್ಗೊಂಡಾಗ ನಿರಂಕುಶ, ಮುಕ್ತ ರಾಜ್ಯ ವ್ಯವಸ್ಥೆಯ ಪ್ರತಿಪಾದಕ ಪೀಟರ್ ಕ್ರೊಪೋಟ್‌ಕಿನ್ ಅವರನ್ನು ಭೇಟಿಯಾಗಿದ್ದರು. ಇವನು ರಷ್ಯಾ ಮೂಲದ ಚಿಂತಕ. ಎಲ್ಲಾಬಗೆಯ ಅಧಿಕಾರಶಾಹಿಯನ್ನು, ಶ್ರೇಣೀಕೃತ ಆಡಳಿತ ವ್ಯವಸ್ಥೆಯನ್ನು ವಿರೋಧಿಸುವ ರಾಜಕೀಯ ವಾದಗಳು, ಸಮಾಜವಾದಗಳು ಮತ್ತು ಕಮ್ಯುನಿಸಂ ವಾದಗಳು ಶೈಶವಾವಸ್ಥೆಯಲ್ಲಿದ್ದ ಕಾಲವದು. ಈ ಚಿಂತನೆಗೆ ತೆರೆದುಕೊಂಡ ಸ್ವಾಮಿ ವಿವೇಕಾನಂದರು ಸಮಾಜವಾದಿ ನೆಲೆಯೆಡೆಗೆ ನಮ್ಮ ಸಮಾಜಗಳು ವಿಕಾಸವಾಗುತ್ತದೆಂದು ಭವಿಷ್ಯ ನುಡಿದರು. ಅಲ್ಲದೆ ಶೂದ್ರರು ಈ

ಸಮಾಜದಲ್ಲಿ ಆಳ್ವಿಕೆಯ ಮುಂಚೂಣಿಯಲ್ಲಿರುತ್ತಾರೆ ಎಂದು ಊಹಿಸಿದರು. ಆದರೆ ಸ್ವಾಮೀಜಿಯವರು ಒತ್ತಿಹೇಳಿದ್ದು ಕೇವಲ ಆರ್ಥಿಕ ಸಮಾನತೆಯಷ್ಟೇ ಅಲ್ಲ. ಅಸಮಾನತೆಗೆ ಕಾರಣವಾಗುವ ಎಲ್ಲ ಅನಿಷ್ಟ ಸಾಮಾಜಿಕ ಪದ್ಧತಿಗಳಿಂದ ಬಿಡುಗಡೆ ಪಡೆಯುವ ಮೂಲಕ ಸಾಧಿಸುವ ಆರ್ಥಿಕ ಸಮಾನತೆ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತದೆ. ಆದರೆ ಸಂಪತ್ತಿನ ಸಮಾನ ಹಂಚಿಕೆಯಷ್ಟೇ ಸಾಮಾಜಿಕ ಸ್ಥಿರತೆಯನ್ನು ತರಲಾರದು, ಮನೋ ಧರ್ಮದಲ್ಲಿ ಬದಲಾವಣೆಯಾಗದೆ, ಮಾನಸಿಕ ಸಿದ್ಧತೆಯಿಲ್ಲದೆ ಗಳಿಸಿದ ಸಂಪತ್ತು, ತಂತ್ರಜ್ಞಾನ ಕ್ರೌರ್ಯ-ಹಿಂಸೆಗಳಿಂದ ಕೂಡಿದ ಅನಿಷ್ಟ ಸಮಾಜವನ್ನು ಮಾತ್ರ ರೂಪಿಸಬಲ್ಲುದು. ಇದು ನಮ್ಮ ನಡುವಿನ ಇಂದಿನ ಸತ್ಯವೂ ಹೌದು. ಈ ಅಂಶವನ್ನು ಸ್ವಾಮೀಜಿ ಯವರು ತಮ್ಮ ಭಾಷಣಗಳಲ್ಲಿ ವಿವರಿಸಿದ್ದಾರೆ. ಆರೋಗ್ಯಕರ ಉದ್ಯಮಶೀಲತೆಯನ್ನು, ಸಂಪತ್ತಿನ ಗಳಿಕೆಯನ್ನು ಸ್ವಾಮೀಜಿ ಯವರು ವಿರೋಧಿಸಲಿಲ್ಲವಾದರೂ ಇವುಗಳ ಮಿತಿಯನ್ನು ವಿವ ರಿಸಿದ್ದಾರೆ. ನೀನು ಕಂಡುಹಿಡಿಯುವ ಪ್ರತಿಯೊಂದು ಯಂತ್ರವೂ ಇಪ್ಪತ್ತು ಜನರನ್ನು ಶ್ರೀಮಂತರನ್ನಾಗಿ ಮಾಡಿದರೂ ಇಪ್ಪತ್ತುಸಾವಿರ ಜನರನ್ನು ಬಡವರನ್ನಾಗಿ ಮಾಡುತ್ತದೆ ಎಂದು ಯಂತ್ರ ನಾಗರಿ ಕತೆಯ ಮಿತಿಯನ್ನು ಸ್ಪಷ್ಟಪಡಿಸುತ್ತಾರೆ. ಜಗತ್ತಿನ ಸಕಲ ಸಂಪತ್ತನ್ನೂ ತಂದು ನೀವು ಒಂದು ಹಳ್ಳಿಗೆ ಸುರಿದರೂ ಜನ ತಮಗೆ ತಾವೇ ಸಹಾಯಮಾಡಿಕೊಳ್ಳುವುದನ್ನು ಕಲಿಸದಿದ್ದರೆ ಇದೆಲ್ಲವೂ ವ್ಯರ್ಥ ಎಂದು ಸ್ವಾವಲಂಬನೆಯೆಡೆಗೆ ಬೆಳೆಯಬೇಕಾದ ಅನಿವಾರ್ಯತೆ ಯನ್ನು ಹೇಳಿದರು. ಆಧುನಿಕ ಕಾಲದ ಸಮಾಜಕಾರ್ಯದ ಬೀಜಮಂತ್ರ 'ಸ್ವಾವಲಂಬನೆ'ಯಾಗಿದೆ. ನೀನೇ ಮೀನು ಹಿಡಿದು ಜನರಿಗೆ ಕೊಡುವ ಬದಲು ಜನರಿಗೇ ಮೀನು ಹಿಡಿಯುವುದನ್ನು ಕಲಿಸು, ಇದೇ ನಿಜವಾದ ಸಮಾಜ ಕಾರ್ಯ ಎಂದು ನಾವು ಸಮಾಜಕಾರ್ಯದ ವಿದ್ಯಾರ್ಥಿಗಳಿಗೆ ಪಾಠಮಾಡುತ್ತೇವೆ. ಧರ್ಮ ಸಮನ್ವಯ, ಸ್ವಾವಲಂಬನೆ ಮತ್ತು ಸಂಸ್ಕೃತಿ ಸಮಾಜಕಾರ್ಯದ ಹೃದಯವಾಗಬೇಕು, ಇದರ ಜೊತೆಗೆ ನಿಸ್ವಾರ್ಥ ಸಂಘಟನೆ ಸಾಧ್ಯ ವಾಗಬೇಕು ಎಂಬುದು ಸ್ವಾಮೀಜಿಯವರು ನೀಡಿದ ಬದಲಾ ವಣೆಯ ಸೂತ್ರಗಳು. ನಮ್ಮದೇಶದ ಜನ ಸಂಘಟಿತರಾಗುವುದರಲ್ಲಿ ಹಿಂದೆ ಬೀಳುವುದರಿಂದ ನಾವು ಅವನತಿ ಹೊಂದಿದ್ದೇವೆ ಎಂಬು ದನ್ನು ಸ್ವಾಮೀಜಿ ಅನೇಕ ಬಾರಿ ಹೇಳಿದ್ದಾರೆ. ಇದೆಲ್ಲದರ ಜೊತೆ ಉತ್ತಮ ಆಡಳಿತ ಮತ್ತು ಪರಿಸರ ಸಂರಕ್ಷಣೆಯನ್ನೂ ನಾವು ಸೇರಿಸಿ ಕೊಳ್ಳಬೇಕು.

ಈ ಹಿನ್ನೆಲೆಯಲ್ಲಿ ರಾಮಕೃಷ್ಣ-ಸ್ವಾಮಿವಿವೇಕಾನಂದ ಭಾವ ಧಾರೆಯಿಂದ ಪ್ರೇರಣೆ ಪಡೆದ ಸ್ವಯಂಸೇವಾ ಸಂಸ್ಥೆಗಳ ಕಾರ್ಯ ವ್ಯಾಪ್ತಿಯನ್ನು ಪರಿಶೀಲಿಸೋಣ. ರಾಮಕೃಷ್ಣ-ವಿವೇಕಾನಂದ ಭಾವ ಧಾರೆಯಿಂದ ಪ್ರೇರಣೆ ಪಡೆದ ಎಲ್ಲ ಸಂಸ್ಥೆಗಳ ಪಟ್ಟಿಮಾಡುವುದು ಈ ಲೇಖನದ ಉದ್ದೇಶವಲ್ಲ. ಈ ಭಾವಧಾರೆಯ ಪ್ರೇರಣೆಯಿಂದ ಆರಂಭವಾದ ಕೆಲವು ಸಂಸ್ಥೆಗಳಾದರೂ ಸ್ವಾಮಿ ವಿವೇಕಾನಂದರ ಅಭಿವೃದ್ಧಿ ಸೂತ್ರಗಳಿಗೆ ಹತ್ತಿರವಾಗಿಯೇ ಬೆಳೆಯುತ್ತಿರುವುದು ಸಂತೋಷದ ವಿಷಯ. ಮೈಸೂರು ಪ್ರಾಂತ್ಯವನ್ನೇ ಕೇಂದ್ರವಾಗಿಟ್ಟು ಕೊಂಡು ನೋಡಿದಾಗ ಸುತ್ತ ಸುಮಾರು ನೂರು ಮೈಲು ವ್ಯಾಪ್ತಿ ಯಲ್ಲೇ ಎಂಟು ಅಥವಾ ಹತ್ತು ಸಂಸ್ಥೆಗಳು ಕಂಡುಬರುತ್ತವೆ. ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಪ್ರಾರಂಭವಾದ ಶಾಲಾ-ಕಾಲೇಜುಗಳು, ವೃತ್ತಿ ತರಬೇತಿ ಸಂಸ್ಥೆಗಳಂತೂ ಲೆಕ್ಕವಿಲ್ಲದಷ್ಟು ಇವೆ. ಇದು ಭಾರತದ ಉದ್ದಗಲಕ್ಕೂ ಕಂಡುಬರುವ ವಿದ್ಯಮಾನ.

ಈ ಭಾವಧಾರೆಯಿಂದ ಪ್ರೇರಣೆ ಪಡೆದಿದ್ದೇವೆ ಎಂದು ಹೇಳಿ ಕೊಂಡರೂ ಅನೇಕ ಸಂಸ್ಥೆಗಳು ಮುಖ್ಯವಾಗಿ ಶಿಕ್ಷಣ ಸಂಸ್ಥೆಗಳು ನಾವು ಈ ವರೆಗೆ ಚರ್ಚಿಸಿದ ರಾಮಕೃಷ್ಣ-ವಿವೇಕಾನಂದ ಹೃದಯ ಸೂತ್ರಗಳ ಎಷ್ಟು ಅಂಶಗಳನ್ನು ಒಳಗೊಂಡಿದೆ ಎಂಬುದು ಪ್ರಶ್ನಾ ರ್ಹವೇ ಸರಿ. ನೂರಕ್ಕೆ ನೂರರಷ್ಟು ಇದು ಸಾಧ್ಯವಾಗಬೇಕು ಎಂಬ ನಿರೀಕ್ಷೆ ನಮಗಿಲ್ಲದಿದ್ದರೂ ನಿಜವಾದ ದರಿದ್ರ ನಾರಾಯಣ ಸೇವೆ ಇಲ್ಲಿ ನಡೆಯುತ್ತಿದೆಯೆ ಎಂಬ ಪ್ರಶ್ನೆ ಹುಟ್ಟುವಂತೆ ಕೇವಲ ಉಳ್ಳವ ರಿಗೆ ಮಾತ್ರ ತಮ್ಮ ಸೇವೆ ಸಿಗಲು ಸಾಧ್ಯ ಎಂಬಂತಹ ವ್ಯವಸ್ಥೆಯನ್ನು ಅಣಿಗೊಳಿಸಿವೆ. ವಿವೇಕಾನಂದರ ಹೆಸರಿನಲ್ಲಿ ಹುಟ್ಟಿಕೊಂಡಿರುವ ಅನೇಕ ಶಿಕ್ಷಣ ಸಂಸ್ಥೆಗಳು ಶಿಕ್ಷಣವನ್ನು ಒಂದು ಉದ್ಯಮದಂತೆ ಹಣ ಗಳಿಕೆಯ ಮಾರ್ಗವಾಗಿ ಬಳಸಿಕೊಂಡು ಮುನ್ನಡೆದಿವೆ. ಜಾಗತೀ ಕರಣ, ಉದಾರೀಕರಣದ ಈ ಆಧುನಿಕ ಕಾಲದಲ್ಲಿ ರಾಮಕೃಷ್ಣ -ವಿವೇಕಾನಂದ ಭಾವಧಾರೆಯ ಅನುಷ್ಠಾನ ನಮ್ಮನ್ನು ವಾಸ್ತವ ಜಗತ್ತಿಗೆ ದೂರ ಮಾಡೀತೆಂಬ ಭಯ ಅನೇಕ ಸಂಘಸಂಸ್ಥೆಗಳಿಗೆ ಇರುವಂತೆ ಕಂಡುಬರುತ್ತದೆ. ಆದರೆ ಆಧುನಿಕ ಅಭಿವೃದ್ಧಿ ಪರಿ ಕಲ್ಪನೆಯು ಈಗ ಬಹುಸಂಖ್ಯಾತರು ಬಯಸುವ ಪಾಶ್ಚಾತ್ಯ ಮಾದ ರಿಗೆ ಹತ್ತಿರವಾಗಿರಬೇಕೆಂದು, ಆ ಮೂಲಕ ಮಾತ್ರವೇ ಮನುಷ್ಯ ಜೀವನದ ಸಾರ್ಥಕತೆ ಸಾಧ್ಯವೆಂದೂ ಭಾವಿಸುವ ಅಂಧಾನು ಕರಣೆಯ ಫಲವಾಗಿದೆ. ಸರ್ಕಾರಗಳೂ ಈ ಬೇಡಿಕೆಯನ್ನು ಪೂರೈಸಿ ತನ್ನ ಕುರ್ಚಿ ಉಳಿಸಿಕೊಳ್ಳುವ ಭರದಲ್ಲಿರುವುದರಿಂದ ಅನುಕರಣೆ ಮಾದರಿಯ ಅಭಿವೃದ್ಧಿಗೆ ಅಧಿಕೃತ ಸ್ಥಾನಮಾನಗಳು ಲಭಿಸಿವೆ. ಭಾರತದ ವಿಶಿಷ್ಟ ಸಂಸ್ಕೃತಿಗೆ ಅನುಗುಣವಾದ ಅಭಿವೃದ್ಧಿಯನ್ನು ನಾವು ರೂಪಿಸುವುದಾದರೆ ಪರಂಪರೆಯ ಆರೋಗ್ಯಕರವಾದ ಭಾಗವನ್ನು ಒಳಗೊಂಡು ಸಾಧಿಸಬೇಕಾಗುತ್ತದೆ. ಬಹುಮುಖ್ಯ ವಾಗಿ ವಿವೇಕಾನಂದ-ಗಾಂಧಿ ಚಿಂತನೆಗಳಿಗೆ ಯಾವ ಪೂರ್ವಗ್ರಹ ಗಳೂ ಇಲ್ಲದೆ ತೆರೆದುಕೊಳ್ಳಬೇಕು. ಅನುಕರಣಾ ಸಂಸ್ಕೃತಿ ಈಗ ಆಳವಾಗಿ ಬೇರೂರಿರುವುದರಿಂದ ಯಾವ ಆರೋಗ್ಯಕರ ಅಭಿವೃದ್ಧಿ ಯನ್ನು ನಾವು ಸುಲಭವಾಗಿ ಸಾಧಿಸಬಹುದಾಗಿತ್ತೋ ಅದಕ್ಕೆ ನಮ್ಮ ಅನುಕರಣಾ ಪ್ರೀತಿ ದೊಡ್ಡ ಅಡಚಣೆಯಾಗಿದೆ. 'ವಿವೇಕಾನಂದ' ಫಲಕದಡಿಯಲ್ಲಿ ಕೆಲಸಮಾಡುತ್ತಿರುವ ಬಹುತೇಕ ಸಂಸ್ಥೆಗಳು ವ್ಯಾಪಾರಿ ಮನೋಧರ್ಮದಿಂದ ಕೆಲಸಮಾಡುತ್ತಿದ್ದರೂ ರಾಮಕೃಷ್ಣ - ವಿವೇಕಾನಂದ ಭಾವಧಾರೆಯ ಹಿನ್ನೆಲೆಯೇ ಇಲ್ಲದಿದ್ದರೆ ಈ ಸಂಸ್ಥೆಗಳು ಸಮಾಜಘಾತುಕ ಸಂಸ್ಥೆಗಳಾಗಿಬಿಡುತ್ತಿದ್ದವೋ ಏನೋ? ರಾಮಕೃಷ್ಣರ ಆಗಮನ ಮತ್ತು ಪ್ರಭಾವ ಭಾರತದ ಚರಿತ್ರೆಯ ಸುಕೃತವೆಂದೇ ಭಾವಿಸಬೇಕು.